# ಟೀನೇಜ್ ತಲೆನೋವು



**ಮಕ್ಕಳು ಹದಿಹರೆಯಕ್ಕೆ ಕಾಲಿಡುತ್ತಿದ್ದಂತೆಯೇ ಅವರೊಂದಿಗೆ ಗೆಳೆಯರಂತೆ ವ್ಯವಹರಿಸಿ. ಮಾತನಾಡುವಾಗ ಯಾವಾಗಲೂ 'ನಾನು ನಿನ್ನ ವಯಸ್ಸಿನಲ್ಲಿದ್ದಾಗ' ಎಂಬುದನ್ನು ಬಳಸಬೇಡಿ.**

■ **ಲಾವಣ್ಯಗೌರಿ ವೆಂಕಟೇಶ್**

ಪೋಷಕರು ಬೈದರು ಎಂದು ಕೋಪಿಸಿಕೊಂಡು ಹದಿಹರೆಯದ ಮಕ್ಕಳು ಮನೆಬಿಟ್ಟು ಹೋಗುತ್ತಿರುವುದು ಇತ್ತೀಚಿನ ಕಳವಳಕಾರಿ ಬೆಳವಣಿಗೆ. ಇದು ವಿಪರೀತಕ್ಕೆ ತಲುಪಿ ಆತ್ಮಹತ್ಯೆಯ ಮೊರೆಹೋಗುವುದು ಕೂಡ ಮಾಮೂಲಿ ಎನ್ನುವಂತಾಗಿದೆ.

ಕೆಲ ವರ್ಷಗಳ ಹಿಂದೆ ಪರೀಕ್ಷಾ ಫಲಿತಾಂಶ ಬಂದಾಗ, ಕಡಿಮೆ ಅಂಕ ಗಳಿಸಿದವರಿಂದ ಇಂಥ ಅವಘಡಗಳು ಸಂಭವಿಸುತ್ತಿದ್ದವು. ಆದರೆ ಈಚೆಗೆ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಡೆಯುವ ಕಿರುಪರೀಕ್ಷೆಗಳನ್ನೂ ಮಕ್ಕಳು ಹಾಗೂ ಪೋಷಕರು ಗಂಭೀರವಾಗಿ ಪರಿಗಣಿಸಿದ್ದು ಇಂಥ ವ್ಯತಿರಿಕ್ತ ಪರಿಣಾಮಕ್ಕೆ ತುತ್ತಾಗುತ್ತಿದ್ದಾರೆ. ಶಾಲಾ ಪರೀಕ್ಷೆ ಅಷ್ಟೇ ಅಲ್ಲ ಓರಗೆಯವರು ಗೇಲಿ ಮಾಡಿದರೆಂದು ಅಥವಾ ಪೋಷಕರ ಒತ್ತಡ ತಾಳಲಾಗುತ್ತಿಲ್ಲವೆಂದು ಹಲವು ಕಾರಣಗಳನ್ನು ಮುಂದಿಟ್ಟುಕೊಂಡು ಅನಗತ್ಯ ಹೆಜ್ಜೆಗಳನ್ನಿಡುವುದು ಒಂದು ಪಿಡುಗಿನಂತೆ ವ್ಯಾಪಿಸಿಕೊಂಡಿದೆ.

ಕೂಡು ಕುಟುಂಬದಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಪೋಷಕರನ್ನು ಕಳೆದುಕೊಂಡು ಅಣ್ಣ–ತಂಗಿ, ಅಕ್ಕ–ತಮ್ಮ, ಜೊತೆಗೆ ಇನ್ನೂ ಹಲವರನ್ನು ಒಳಗೊಂಡ ಕುಟುಂಬವನ್ನು ದುಡಿದು ಸಾಕಿ ಸಲಹಿದ ಎಷ್ಟೋ ಮಂದಿ ನಮ್ಮ ನಡುವೆಯೇ ಇದ್ದಾರೆ. ಅವರು ಪಟ್ಟ ಶ್ರಮ ಹಾಗೂ ಅನುಭವಿಸಿದ ಒತ್ತಡದ ಅರಿವಾದರೂ ಈಗಿನ ಮಕ್ಕಳಿಗಿದೆಯೇ? ಸಣ್ಣ ಕುಟುಂಬಗಳೇ ಹೆಚ್ಚಾಗಿರುವ ಈಗಿನ ಕಾಲದಲ್ಲಿ ಪೋಷಕರಿಬ್ಬರ ಸಂಪಾದನೆಯಿಂದ ಮಕ್ಕಳಿಗೆ ಎಷ್ಟು ಸಾಧ್ಯವೋ ಅಷ್ಟೂ ಐಷಾರಾಮಿ ಜೀವನವನ್ನು ಕೊಡಲು ಪೋಷಕರು ಪ್ರಯತ್ನಿಸುತ್ತಾರೆ. ಕಷ್ಟದ ಅರಿವಿಯೇ ಇಲ್ಲದ ಮಕ್ಕಳಿಗೆ ಬದುಕಿನ ಕೊಂಚ ಏರುಪೇರನ್ನು ಸಹಿಸುವ ಸಹನೆ, ಶಕ್ತಿ ಇರುವುದಿಲ್ಲ. ಇವೆಲ್ಲಕ್ಕೂ ಕಾರಣ ಸಂವಹನ ಅಥವಾ ಸಂಪರ್ಕದ ಕೊರತೆ. ಮನೆಗಳಲ್ಲಿ ಎಲ್ಲ ಒಂದೊಂದು ಯಂತ್ರಗಳಂತೆ ಮತ್ತೊಂದು ಯಂತ್ರಕ್ಕೆ ಅಂಟಿ ಕುಳಿತಿರುವಾಗ ಮಾತುಕತೆಗೆ, ಒಬ್ಬರಿಗೊಬ್ಬರು ಭಾವನೆಗಳನ್ನು ಹಂಚಿಕೊಳ್ಳುವುದಕ್ಕೆ ಅವಕಾಶ ಎಲ್ಲಿದೆ?

ಮಕ್ಕಳೇ ಸೂಕ್ಷ್ಮಮತಿಗಳಾಗುತ್ತಿದ್ದಾರಾ? ಅಥವಾ ಪೋಷಕರ ಪಾಲನೆಯಲ್ಲಿ ದೋಷವಿದೆಯೇ? ಈ ಕಾಲದಲ್ಲಿ ಮಕ್ಕಳಿಗೆ ಬುದ್ಧಿವಂತರಾಗಲು, ಅದರ ಅನಾವರಣಕ್ಕೆ ಹಲವು ದಾರಿಗಳಿವೆ. ಕೈಗೆಟಕುವ ರೀತಿಯಲ್ಲಿ ಅಂತರ್ಜಾಲದ ಬಳಕೆ, ದೂರದರ್ಶನ ಹಾಗೂ ಬಹುತೇಕ ಆಧುನಿಕ ತಾಂತ್ರಿಕತೆ, ಮಕ್ಕಳ ಬುದ್ಧಿವಂತಿಕೆಯನ್ನು ತೆರೆದಿಡುವಲ್ಲಿ ಯಶಸ್ವಿಯಾಗಿವೆ. ಜೊತೆಗೆ ಇವು ಬುದ್ಧಿಗೇಡಿಯನ್ನಾಗಿಸುತ್ತಲೂ ಇವೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಈ ಪೀಳಿಗೆಯ ಎಂಟು ವರ್ಷದ ಮಗುವಿಗೂ ಯಾರ ಸಹಾಯವಿಲ್ಲದೆ 'ಗೂಗಲ್ ಸರ್ಚ್'ಗೆ ಹೋಗಿ ತನಗೆ ಬೇಕಾದ್ದನ್ನು ಹುಡುಕಿಕೊಳ್ಳುವ ಸಾಮರ್ಥ್ಯವಿದೆ. ಇನ್ನು ದೊಡ್ಡ ಮಕ್ಕಳು ಅದೆಲ್ಲ ಲೀಲಾಜಾಲವಾಗಿದೆ. ಮಕ್ಕಳ ಇಂಥ ಜಾಣ್ಮೆಯನ್ನು ಪೋಷಕರು ಇನ್ನೊಬ್ಬರ ಮುಂದೆ ಹೆಗ್ಗಳಿಕೆಯಿಂದ ಹೇಳಿಕೊಂಡು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಾರೆಯೇ ಹೊರತು, ಅದರಿಂದಾಗುವ ಇತರ ಅಡ್ಡ ಪರಿಣಾಮಗಳ ಬಗ್ಗೆ ಯೋಚಿಸುವುದೇ ಇಲ್ಲ. ಹಾಗೆಂದು ದೂರದರ್ಶನ, ಕಂಪ್ಯೂಟರ್, ಸ್ಮಾರ್ಟ್ ಫೋನ್ ಮುಂತಾದ ಆಧುನಿಕ ತಾಂತ್ರಿಕತೆಯಿಂದ ಮಕ್ಕಳು ಕೆಡುತ್ತಿದ್ದಾರೆಯೇ? ಇವುಗಳನ್ನು ಮಕ್ಕಳಿಂದ ದೂರವಿಡಬೇಕೇ? ಖಂಡಿತಾ ಇಲ್ಲ. ಆಧುನಿಕತೆ ಮುಂದುವರಿದಂತೆ ನಾವೂ ಮುಂದುವರಿಯಬೇಕು. ಹಾಗಾಗಿ ಮಕ್ಕಳು ಈ ತಂತ್ರಜ್ಞಾನದ ಉಪಯೋಗವನ್ನು ಎಷ್ಟರಮಟ್ಟಿಗೆ ಬಳಸಬೇಕು ಎಂಬುದನ್ನು ಪೋಷಕರು ಮೊದಲು ಅರಿಯಬೇಕು.